ಇ) ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ಕೆಲಸಕ್ಕಾಗಿ ಮಾಡಿದ ಖರ್ಚು ಎಷ್ಟು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ.

ಈ) ಈ ಯೋಜನೆ ಮುಗಿಸಲು ವರ್ಷವಾರು ಹಮ್ಮಿಕೊಂಡಿರುವ ಕೆಲಸಗಳು ಯಾವುವು; ಎಂದು ಮುಗಿಸಲಾಗುವುದು?

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು):

ಅ) "ಹೌದು"

ಆ) "ಹೌದು"

ಇ) 30-11-2002 ರ ವರೆಗೆ (ಗದಗ್ -ಸೋಲ್ಲಾಪುರ ನಡುವಿನ ಒಟ್ಟಾರೆಯೋಜನೆಗೆ) ರೈಲ್ವೆ ಮಂತ್ರಾಲಯ ಭಾರತ ಸರ್ಕಾರವು ರೂ. 153.51 ಲಕ್ಷಗಳ ಒಟ್ಟಾರೆ ವೆಚ್ಚವನ್ನು ಮಾಡಿದೆ.

ಈ) ರೈಲ್ವೆ ಮಂತ್ರಾಯವು ಬಿಜಾಪುರ ಬಾಗಲಕೋಟೆ (97 ಕಿ.ಮೀ) ಮತ್ತು ಬಾಗಲಕೋಟೆ ಗದಗ್ (93 ಕಿ.ಮೀ) ನಡುವಿನ ಕೆಲಸವನ್ನು ಏಕಕಾಲದಲ್ಲಿ ಕೈಗೆತ್ತಿಕೊಂಡಿದೆ. ಎಲ್ಲಾ ಕೆಲಸಗಳು ಅಂದರೆ ಭೂ ಅಗೆತ ಸಣ್ಣ ಸೇತುವೆಗಳು, ದೊಡ್ಡ ಸೇತುವೆಗಳ ನಿರ್ಮಾಣ, ಜಲ್ಲಿಸಂಗ್ರಹಣೆ, ಇತ್ಯಾದಿಗಳನ್ನು ಏಕಕಾಲದಲ್ಲಿ ಮಾಡಲಾಗುತ್ತಿವೆ. ಮಾರ್ಗದ ಕೊನೆಯ ಸಂಪರ್ಕ ಜೋಡಣೆಯನ್ನು ಮೇಲಿನ ಎಲ್ಲಾ ಕೆಲಸಗಳು ಪೂರ್ಣಗೊಂಡ ನಂತರ ಮಾಡಲಾಗುತ್ತದೆ.

ಬಾಗಲಕೋಟೆ ತಾಲ್ಲೂಕಿನ ಸರ್ಕಾರಿ ಸಾರಾಯಿ ಮಾರಾಟ ಗುತ್ತಿಗೆದಾರರ ವಿವರ

2112 (2397) - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ತಾಲ್ಲೂಕಿನ ಸರಕಾರಿ ಸಾರಾಯಿ ಮಾರಾಟ ಗುತ್ತಿಗೆದಾರರು ಅನುಮತಿ ನೀಡಲಾದ ಸಾರಾಯಿ ಅಂಗಡಿಗಳಿಗಿಂತ ಹತ್ತಾರು ಪಟ್ಟು ಅಂಗಡಿಗಳನ್ನು ತೆರೆದು ವ್ಯಾಪಾರ ಮಾಡುತ್ತಾ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಸಾರಾಯಿ ಅಂಗಡಿಗಳನ್ನು ಅನುಮತಿ ನೀಡಿದ ಸಮಯಕ್ಕಿಂತ ಬಹಳ ಹೊತ್ತಿನ ವರೆಗೆ ಮುಕ್ತವಾಗಿಟ್ಟು ವ್ಯಾಪಾರ ಮಾಡುತ್ತಿರುವುದು ನಿಜವೆ?

ಇ) ಈ ಅಕ್ರಮ ಚಟುವಟಿಕೆಯಲ್ಲಿ ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ನಷ್ಟ ಮಾಡುತ್ತಿರುವುದಾಗಿ ಅನೇಕ ದೂರುಗಳು ಬಂದಿದ್ದು, ಸರ್ಕಾರ ತಪ್ಪಿತಸ್ಥರ ಮೇಲೆ ಕ್ರಮವನ್ನೇನಾದರೂ ಜರುಗಿಸಲು ಇಚ್ಚಿಸಿದೆಯೆ ಯಾವ ಕ್ರಮ ಜರುಗಿಸುವುದು, ವಿವರ ನೀಡುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.